ಮಾಡಿರುವ ಝರಿಗಳ ದಾರಿಗಳಲ್ಲಿ ನಡೆಯುವುದು, ಅಂದರೆ ನನಗೆ ಪಂಚಪ್ರಾಣ. ಆದರೆ, ನಾನೊಬ್ಬನೇ ಯಾವತ್ತೂ ಆ ಸಾಹಸಕ್ಕೆ ಕೈ ಹಾಕಿರಲಿಲ್ಲ. ನಾನೇನಿದ್ದರೂ ಆ ಪಿನೋ ಹಳ್ಳಿಯ ಹುಡುಗರ ಹಿಂದೆ ಬಾಲದಂತೆ ಹೋಗುತ್ತಿದ್ದೆ. ಅವರೆಲ್ಲರೂ ನನಗಿಂತ ಎರಡು ಅಥವಾ ಮೂರು ವರ್ಷ ದೊಡ್ಡವರಾಗಿದ್ದರು. ಅವರಲ್ಲಿ ಪೊಲೀಸಿನವನ ಮಗನಿಗೆ ಒಂಬತ್ತು ವರ್ಷ ವಯಸ್ಸಾಗಿತ್ತು. ಹಾಗಾಗಿ ಅವನೇ ನಮ್ಮ ನಾಯಕ ಹಾಗೂ ಮಾರ್ಗದರ್ಶಿಯಾಗಿದ್ದ. ಅವನ ಪ್ರಕಾರ ಆ ಸುತ್ತಮುತ್ತಲಿನ ಯಾವ ಜಾಗಗಳೂ ಅವನಿಗೆ ಗೊತ್ತಿಲ್ಲದೇ ಇರಲಿಲ್ಲ. ಅಲ್ಲಿನ ನೀರಿನ ಝರಿಗಳು, ಚಕ್ರವ್ಯೂಹವನ್ನು ಹೋಕ್ಕಂತಾಗುತ್ತಿದ್ದ ಗುಹೆಗಳು ಎಲ್ಲಾ ಅಂದರೆ ಎಲ್ಲವೂ ಗೊತ್ತು ಅಂತ ಕೊಚ್ಚಿಕೊಳ್ಳುತ್ತಿದ್ದ. ಆದರೆ, ವಾಸ್ತವದಲ್ಲಿ ಅವನ ಮಾತುಗಳೆಲ್ಲಾ ಸುಳ್ಳಾಗಿದ್ದವು. ಏಕೆಂದರೆ, ಅವನು ನಮ್ಮನ್ನು ಸರಿ ದಾರಿಯಲ್ಲಿ ಕರೆದುಕೊಂಡು ಬಂದುದಕ್ಕಿಂತ ಕಳೆದು ಹೋಗುವಂತೆ ಮಾಡಿದ್ದೇ ಹೆಚ್ಚು.

ಒಮ್ಮೆ ಅವನು ಅಂಥದ್ದೊಂದು ಪೇಚಿಗೆ ನಮ್ಮನ್ನು ಸಿಕ್ಕಾಕಿಸಿದ್ದ. ಆ ಹೊತ್ತಿನಲ್ಲಿ ಕಳ್ಳಸಾಗಾಣಿಕೆದಾರನೊಬ್ಬ ಬಂದು ಬಚಾವು ಮಾಡದೇ ಹೋಗಿದ್ದರೆ ನಮಗಿನ್ನಾವ ಕಷ್ಟ ಬರುತ್ತಿತ್ತೋ ಏನೋ? ಆ ಕಳ್ಳಸಾಗಾಣಿಕೆದಾರನಿಗೆ ನಮ್ಮ ಭಯದ ಕೂಗುಗಳು ಕೇಳಿ ಅವನು ನಮ್ಮೆದುರು ಪ್ರತ್ಯಕ್ಷನಾಗಿದ್ದ. ಆಗವನು ನಮಗೇ ಥೇಟ್ ಅವಧೂತನಂತೇ ಕಂಡಿದ್ದ. ಆಮೇಲೆ ನೋಡಿದರೆ, ಅವನು ನಮ್ಮ ಗುಂಪಿನಲ್ಲಿದ್ದ ಹುಡುಗನೊಬ್ಬನ ಚಿಕ್ಕಪ್ಪನಾಗಿದ್ದ. ಆ ಇಡೀ ಗುಂಪಿನಲ್ಲಿ ನಾನೇ ಅತ್ಯಂತ ಚಿಕ್ಕವನಾಗಿದ್ದರಿಂದ ನನ್ನನ್ನು ಹಳ್ಳಿಯವರೆಗೂ ತನ್ನ ಹೆಗಲ ಮೇಲೆ ಕೂರಿಸಿಕೊಂಡು ಕರೆತಂದಿದ್ದ. ನಾವು ಹಳ್ಳಿಯನ್ನು ತಲುಪುವ ಹೊತ್ತಿಗಾಗಲೇ ಕತ್ತಲಾಗಿ ಹೋಗಿತ್ತು. ಅಷ್ಟೊತ್ತಿಗೆ ನನ್ನ ತಾಯಿ ಅಲ್ಲಿಗೆ ಬಂದು ತಮ್ಮ ಮಕ್ಕಳಿಗಾಗಿ ಕಾಯುತ್ತಿದ್ದ ಇತರೆ ಮಕ್ಕಳ ತಾಯಂದಿರನ್ನು ಭೇಟಿಯಾಗಿದ್ದಳು. ಆದರೆ, ಅವರಾರೂ ಆತಂಕಗೊಂಡಿರದ್ದನ್ನು ಕಂಡು ಚಕಿತಗೊಂಡಿದ್ದಳು. ಅವರು ನಾವು ತಡವಾಗಿ ಬರುವುದಕ್ಕೆ ಒಗ್ಗಿ ಹೋಗಿದ್ದರು. ಹಾಗಾಗಿ ನಮ್ಮನ್ನು ಕಾಣುತ್ತಲೇ ಬೈಯ್ಯುವುದಿರಲಿ ಅವರಾರೂ ತುಟಿಕ್ ಪಿಟಿಕ್ ಅನ್ನಲಿಲ್ಲ. ನನ್ನ ತಾಯಿ ನನ್ನನ್ನು ಕಳ್ಳಸಾಗಾಣಿಕೆದಾರನ ಹೆಗಲ ಮೇಲಿಂದ ಕೆಳಗಿಳಿಸಿಕೊಂಡು, 'ಹೆದರಿಕೊಂಡಿದ್ಯಾ ಕಂದ?' ಅಂತ ಕೇಳಿದಳು. 'ಇಲ್ಲ ಅಮ್ಮ' ಅಂತ ನಾನು ಸುಳ್ಳುಹೇಳಿದೆ.

## ಅರಾಜಕತಾವಾದಿಗಳ ನಿರ್ಗಮನ

ಅದೊಂದು ದಿನ ನನ್ನ ತಾಯಿ ನನ್ನನ್ನು ಪಕ್ಕಕ್ಕೆ ಕರೆದು ಗುಟ್ಟನ್ನು ಹೇಳುವಂತೆ, 'ಪ್ರೀತಿಯ ಕಂದ, ನೀನು ನಿನ್ನ ಅಪ್ಪನಿಗೋಸ್ಕರ ಕೆಲಸವೊಂದನ್ನು ಮಾಡಿಕೊಡಬೇಕಾಗಿದೆ. ನೀನು ಲುಗಾನೋಕ್ಕೆ ಹೋಗಿ ಅಲ್ಲಿ ಅಪ್ಪನ ಗೆಳೆಯರೊಬ್ಬರಿಗೆ ಪತ್ರವೊಂದನ್ನು ತಲುಪಿಸಬೇಕು. ನಿನಗೆ ಆ ಚರ್ಚ್ ನೆನಪಿದೆ ಅಲ್ವಾ?' ಅಂತ ಮೆಲ್ಲಗೆ ಉಸುರಿದಳು.

'ಓಹ್ ನೆನಪಿದೆ, ನಾವಲ್ಲಿ ಆಟ ಆಡಿದ್ದು, ಕಪ್ಪು ಹಾಡುಗಳನ್ನು ಹಾಡಿದ್ದು.'

'ಹೌದು ಅದೇ ನೋಡು, ಜಾಣ ನೀನು! ನೀನಲ್ಲಿ ಬ್ರೂನೋನನ್ನು ಕೂಡಿಕೊಳ್ಳಬೇಕು. ನಾನು ನಿನ್ನ ಮೇಲಂಗಿಗೆ ಪತ್ರವೊಂದನ್ನು ಹೊಲಿಯುತ್ತೇನೆ. ಅದು ಯಾರಿಗೂ ಕಾಣುವುದಿಲ್ಲ. ಜೊತೆಗೆ ಪೊಲೀಸರಿಗೂ ನಿನ್ನ ಮೇಲೆ ಅನುಮಾನ ಬರುವುದಿಲ್ಲ.'

'ಆಗಲಿ ಅಮ್ಮ.'

'ಈ ಕೆಲಸ ಮಾಡಲು ನಿಂಗೇನೂ ಭಯ ಇಲ್ಲ ತಾನೆ?'

'ಭಯಾನೂ ಇಲ್ಲ, ಎಂಥದೂ ಇಲ್ಲ. ನೋಡು ಬೇಕಿದ್ರೆ ಕಾಲುಗಳನ್ನ, ನಡುಗ್ತಾ ಇದಾವಾ ಅಂತ.' ಅನ್ನುತ್ತಾ ನಾನು ನನ್ನ ಮಂಡಿಗಳನ್ನು ಹತ್ತಿರಕ್ಕೆ ಕೂಡಿಸಿಕೊಂಡು ತಾಯಿಗೆ ತೋರಿಸಿದೆ.